ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಒದಗಿಸಲಾಗಿರುತ್ತದೆ. ಗುಲ್ಬರ್ಗಾ ಹಾಗೂ ಹಾಸನ ವಿಮಾನ ನಿಲ್ದಾಣಗಳನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ನಿರ್ಮಿಸಿ ಕಾರ್ಯಾಚರಣೆಗೊಳಿಸುವಂತೆ ಪ್ರಸ್ತಾವನೆಯೊಂದನ್ನು ನಾಗರೀಕ ವಿಮಾನಯಾನ ಮಂತ್ರಾಲಯ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಅವರ ಅನು;ಮತಿಯನ್ನು ನಿರೀಕ್ಷಿಸಲಾಗಿದೆ.

5152 (5908) ಶೀ ಸುನೀಲ್ ವಲ್ಲಾಪುರಿ (ಶಹಾಬಾದ್): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅನುಗುಣವಾಗಿ ವಾರ್ಡನ್‌ಗಳು ಇದ್ದಾರೆಯೇ;

ಆ) ಈ ವಾರ್ಡನ್‌ಗಳು ಹಾಜರಾಗದೇ ಇರುವುದರಿಂದ ಮಕ್ಕಳಿಗೆ ಸರಿಯಾದ ಸೌಲಭ್ಯ ಒದಗಿಸುತ್ತಿಲ್ಲದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮವೇನು?

ಇ) ಶಹಾಬಾದ್ ವಿಧಾನ ಸಭಾ ಕ್ಷೇತ್ರದಲ್ಲಿ ಕರ್ನಾಟಕ ಭೂ ಸೇನಾ ನಿಗಮದವರು ಕಟ್ಟಡ ನಿರ್ಮಾಣ ಕಾರ್ಯ ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸಮಾಜ ಕಲ್ಯಾಣ ಇಲಾಖೆಯ ವಸತಿ ವಿದ್ಯಾರ್ಥಿನಿಲಯಗಳಲ್ಲಿ ಯಾವ ಯಾವ ಹುದ್ದೆಗಳು ಖಾಲಿ ಇವೆ (ವಿವರ ಒದಗಿಸುವುದು)

ಉ) ಹಾಗಿದ್ದಲ್ಲಿ, ಭರ್ತಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ;

ಊ) ವಿದ್ಯಾರ್ಥಿಗಳಿಗೆ ಅನುಗುಣವಾಗಿ ವಸತಿ ನಿಲಯಗಳು ಇವೆಯೇ? ಇಲ್ಲದಿದ್ದಲ್ಲಿ ವಿದ್ಯಾರ್ಥಿಗಳಿಗೆ ಅನುಗುಣವಾಗಿ ವಸತಿ ನಿಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ; (ತಾಲ್ಲೂಕುವಾರು ವಿವರ ಒದಿಗಿಸುವುದು)

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) ಹೌದು,

ಈವರೆವಿಗೂ ಅಂತಹ 43 ವಾರ್ಡನ್‌ಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗಿದೆ.

ಇ) ಹೌದು

ಈ) ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಕೆಳಕಂಡಂತಿದೆ.

1.	ವಾರ್ಡನ್‌ಗಳು	–247
2.	ಅಡುಗೆಯವರು	–792
3.	ಅಡುಗೆ ಸಹಾಯಕರು	–268
4.	ರಾತ್ರಿ ಕಾವಲುಗಾರರು	–110
	ಒಟ್ಟು	–1417

ಉ) ಹೌದು

ಊ) ಇಲ್ಲ.

ಹಣದ ಲಭ್ಯತೆ ಹಾಗೂ ಅವಶ್ಯಕತೆಯನ್ನನುಸರಿಸಿ ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಪರಿಶೀಲಿಸಲಾಗುವುದು. ಗುಲ್ಬರ್ಗಾ ಜಿಲ್ಲೆಯಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಿರುವ ತಾಲ್ಲೂಕುವಾರು ಪರಿಶಿಷ್ಟ ಜಾತಿಯ ವಸತಿ ನಿಲಯಗಳ ವಿವರ ಕೆಳಕಂಡಂತಿದೆ.

1.	ಅಫ್‌ಜಲಪುರ ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ಕರ್ಜಗಿ
2.	ಆಳಂದ ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ಮುದ್ದಡಗ
3.	ಚಿಂಚೋಳಿ, ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯ	–
4.	ಚಿತ್ತಾಪುರ, ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ರಾವೂರ
5.	ಚಿತ್ತಾಪುರ ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯ	ವಾಡಿ
6.	ಜೇವರ್ಗಿ, ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ಮುಂದೇವಾಲ
7.	ಜೇವರ್ಗಿ, ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ಬೀರಾಳ
8.	ಗುಲ್ಬರ್ಗ, ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	–
9.	ಸೇಡಂ, ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ರಂಜೋಳ
10.	ಸುರಪುರ, ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ಗದ್ದಲಮರಿ
11.	ಸುರಪುರ, ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯ	–
12.	ಯಾದಗೀರ್, ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ಇಡ್ಲೂರ್
13.	ಯಾದಗೀರ್, ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯ	ಗಾಜರಕೋಟೆ
14.	ಯಾದಗೀರ್, ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯ	–
15.	ಯಾದಗೀರ್, ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	–